ಸಿ.ಎಂ.ಸಿ. ನಿಪ್ಪಾಣಿಯಲ್ಲಿ ಎನ್.ಆರ್.ವೈ ಯೋಜನೆಯಲ್ಲಿ ನಡೆದಿದೆಯೆಂದು ಹೇಳಲಾದ ಭ್ರಷ್ಟಾಚಾರ

1275 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಸಿ.ಎಂ.ಸಿ. ನಿಪ್ಪಾಣಿಯಲ್ಲಿ ಎನ್.ಆರ್.ವೈ. ಯೋಜನೆಯಲ್ಲಿ ನಡೆದಿದೆಯೆಂದು ಹೇಳಲಾದ ಭ್ರಷ್ಟಾಚಾರ ಸರ್ಕಾರದ ಗಮನಕ್ಕೆ ಬಂದಿದೆಯೆ ?*

ಆ) *ಹಾಗಿದ್ದಲ್ಲಿ, ಸರ್ಕಾರವು ಏನು ಕ್ರಮ ಕೈಗೊಳ್ಳುವುದು.*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಹೌದು. ಈ ವಿಷಯದಲ್ಲಿ ನಡೆದಿದೆಯೆನ್ನಲಾದ ಭ್ರಷ್ಟಾಚಾರದ ಕುರಿತು ಜಿಲ್ಲಾಧಿಕಾರಿ, ಬೆಳಗಾಂ ಇವರಿಗೆ ಆಪಾದನೆಗಳು ಬಂದಿದ್ದು, ಈ ಬಗ್ಗೆ ತನಿಖೆ ನಡೆಸುವಂತೆ ಜಿಲ್ಲಾಧಿಕಾರಿಗಳು ಆದೇಶ ಮಾಡಿದ್ದಾರೆ.

ಆ) ತನಿಖೆ ಮಾಡಿದ ನಂತರ ಹಣ ದುರುಪಯೋಗವಾದ್ದು ಕಂಡು ಬಂದಲ್ಲಿ ಸಂಬಂಧಿಸಿದವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.

ಚಿಕ್ಕೋಡಿ ನಗರದಲ್ಲಿ ತೀವ್ರ ಕುಡಿಯುವ ನೀರಿನ ಅಭಾವ

1274 - ಶ್ರೀ ಸುಭಾಷ್ ಜೋಷಿ (ನಿಪ್ಪಾಣಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ಚಿಕ್ಕೋಡಿ ನಗರದಲ್ಲಿ ತೀವ್ರ ಕುಡಿಯುವ ನೀರಿನ ಅಭಾವವಿರುವುದು. ಸರ್ಕಾರದ ಗಮನಕ್ಕೆ ಬಂದಿದೆಯೇ ?*

ಆ) *ಹಾಗಿದ್ದಲ್ಲಿ, ಇದನ್ನು ನೀಗಿಸಲು ಸರ್ಕಾರವು ಏನು ಕ್ರಮ ತೆಗೆದುಕೊಂಡಿದೆ ?*

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) ಕೃಷ್ಣಾ ನದಿಯಿಂದ ಚಿಕ್ಕೋಡಿ ಪಟ್ಟಣಕ್ಕೆ ಅಭಿವೃದ್ಧಿ ನೀರು ಸರಬರಾಜು ಮಾಡಲು 247-50ಲಕ್ಷ ರೂ.ಗಳಲ್ಲಿ ಒಂದು ಯೋಜನೆಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆ ನೀಡಲು ಸರ್ಕಾರದ ಪರಶೀಲನೆಯಲ್ಲಿದೆ.

ದಾಂಡೇಲಿಯಲ್ಲಿ ಕರ್ನಾಟಕ ಗೃಹ ಮಂಡಳಿ ಮನೆಗಳನ್ನು ಕಟ್ಟಿರುವುದು

1296 - ಶ್ರೀ ಆರ್.ವಿ. ದೇಶಪಾಂಡೆ (ಹಳಿಯಾಳ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *ದಾಂಡೇಲಿಯಲ್ಲಿ ಕರ್ನಾಟಕ ಗೃಹ ಮಂಡಳಿಯು ಎಸ್ಆರ್ಹೆಚ್ಎಸ್ ಮನೆಗಳನ್ನು ಕಟ್ಟಿದೆಯೇ ?*

ಆ) *ಹಾಗಿದ್ದಲ್ಲಿ, ಕಟ್ಟಲಾಗಿರುವ ಮನೆಗಳ ಸಂಖ್ಯೆ ಮತ್ತು ನಿಗದಿತ ಬೆಲೆ ?*

ಇ) *ಅವುಗಳ ಪೈಕಿ ಕಳೆದ ಹದಿನೈದು-ಇಪ್ಪತ್ತು ವರ್ಷಗಳಿಂದ ಈ ಮನೆಗಳಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವವರ ಸಂಖ್ಯೆ ಎಷ್ಟು ?*

ಈ) *ಅನಧಿಕೃತವಾಗಿ ವಾಸಿಸುತ್ತಿರುವವರ ಗೃಹಗಳ ಮೇಲೆ ಕರ್ನಾಟಕ ಗೃಹ ಮಂಡಳಿಯು ನಿಗದಿಪಡಿಸಿದ ಬೆಲೆ ?*

ಉ) *ಅನಧಿಕೃತವಾಗಿ ವಾಸಿಸುತ್ತಿರುವವ ಗೃಹಗಳ ನಿಗದಿತಬೆಲೆ ?*

ಊ) *ಈ ಮನೆಗಳಲ್ಲಿನ ಬಡ ಅಥವಾ ಮಧ್ಯಮ ವರ್ಗದ ಜನರಿಗಾಗಿ ಸರ್ಕಾರವು ಪ್ರಸ್ತುತ ಸರ್ಕಾರದ ನಡವಳಿಯನ್ನು ಪರಿಷ್ಕೃತಗೊಳಿಸಲು ಕ್ರಮ ಕೈಗೊಂಡಿದೆಯೇ ?*

ಶ್ರೀ ಕೆ.ಜೆ.ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು)

ಅ) ಹೌದು

ಆ) 40 ಎಸ್ ಆರ್ ಹೆಚ್ ಎಸ್ ಮನೆಗಳನ್ನು ಕಟ್ಟಲಾಗಿದೆ. ಮನೆಯೊಂದಕ್ಕೆ ನಿಗದಿತ ಬೆಲೆಯು ರೂ 6352.00.

ಇ) 21.

ಈ) ರೂ. 40,500.00.

ಉ) ರೂ. 6,352.00.

ಊ) ಇದನ್ನು ಪರಿಶೀಲಿಸಲಾಗುವುದು.

ಅಧ್ಯಕ್ಷರು : ಉತ್ತರಗಳನ್ನು ಮಂಡಿಸಲಾಗಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ನಾನು ತಮ್ಮ ಪರ್ಮಿಷನ್ ತೆಗೆದುಕೊಂಡಿದ್ದೇನೆ. ದಯವಿಟ್ಟು ಅದಕ್ಕೆ ಅವಕಾಶ ಮಾಡಿಕೊಡಬೇಕು.

ಜನ್ಮ ದಿನದ ಶುಭಾಶಯಗಳು

ಅಧ್ಯಕ್ಷರು : ನನಗೆ ಒಂದು ಪ್ರಕಟಣೆಗೆ ಅವಕಾಶ ಮಾಡಿಕೊಡಿ.

ಇಂದು ಮಾನ್ಯ ಸದಸ್ಯರಾದ ಶ್ರೀ ಕಟ್ಟಿ ಉಮೇಶ ವಿಶ್ವನಾಥ್ ಅವರ ಜನ್ಮ ದಿನ. ಅವರಿಗೆ ಸದನದ ಪರವಾಗಿ ಮತ್ತು ನನ್ನ ಪರವಾಗಿ ಹಾರ್ದಿಕ ಶುಭಾಶಯಗಳು.

ಯುಗಾದಿ ಹಬ್ಬದ ಪ್ರಯುಕ್ತ ಹೆಚ್ಚುವರಿ ಪಡಿತರ ವಸ್ತುಗಳನ್ನು ನೀಡುವುದು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ಪ್ರತಿ ವರ್ಷವೂ ಕಾರ್ಡ್‌ದಾರರಿಗೆ ಯುಗಾದಿ ಹಬ್ಬದ ಸಮಯದಲ್ಲಿ ಸಕ್ಕರೆ, ಅಕ್ಕಿ ಮತ್ತು ಪಾಮೋಲಿನ್ ಎಣ್ಣೆಯನ್ನು ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿ ಕೊಡತಕ್ಕದ್ದು ಪದ್ಧತಿಯಾಗಿತ್ತು. ಆದರೆ ಈ ವರ್ಷ ಏನಾಗಿದೆ ಎಂದರೆ, ಅಧಿವೇಶನ ಪ್ರಾರಂಭವಾದ ಸಂದರ್ಭದಲ್ಲಿ ಮಾನ್ಯ ಆಹಾರ ಮಂತ್ರಿಗಳ ಗಮನಕ್ಕೆ ತಂದು ನೀವು ಕೊಡತಕ್ಕದ್ದೆಲ್ಲಾ ಬರೀ ಆಶ್ವಾಸನೆಗಳು ಎಂದು ಹೇಳಿದೆ. ಸದನ ನಡೆಯುತ್ತಿರುವಾಗಲೇ ಡೆಲ್ಲಿಗೆ ಹೋಗಿಬರುತ್ತೇನೆ ಅಕ್ಕಿ ಹೆಚ್ಚು ಮಾಡುತ್ತೇನೆ. ಪಾಮೋಲಿನ್ ಎಣ್ಣೆ ಹೆಚ್ಚು ಮಾಡುತ್ತೇನೆ, ಸಕ್ಕರೆ ಹೆಚ್ಚು ಮಾಡುತ್ತೇನೆ ಎಂಬ ಭರವಸೆ ಕೊಟ್ಟು ಹೋದರು. ಈಗಾಗಲೇ ಅಧಿವೇಶನ ಪ್ರಾರಂಭವಾಗಿ 14 ದಿನ ಆಯಿತು. ನಾಡಿದ್ದು ಯುಗಾದಿ ಹಬ್ಬ. ಈ ಸಾರಿ ಕೊಡಬೇಕಾದ ಕೋಟಾದಲ್ಲೂ ಸಹ ಸಕ್ಕರೆ ಮತ್ತು ಪಾಮೋಲಿನ್ ಎಣ್ಣೆ ಇನ್ನೂ ಕಾರ್ಡ್‌ದಾರರಿಗೆ ಕೊಟ್ಟಿಲ್ಲ. ನಾಡಿದ್ದು ಅವರು ಹಬ್ಬ ಆಚರಣೆ ಮಾಡಬೇಕು. ನೀವು ಹೆಚ್ಚಿಗೆ ಕೊಡುವುದು ಬೇಡ ಈ ವಾರದಲ್ಲಿ ಕೊಡುವುದನ್ನಾದರೂ ಕೊಡುವುದಕ್ಕೆ ಸಾಧ್ಯವೇ ಎಂದು ಮಾನ್ಯ ಮಂತ್ರಿಗಳನ್ನು ಕೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್.ವಿ. ದೇಶಪಾಂಡೆ : ಇಡೀ ಕರ್ನಾಟಕ ರಾಜ್ಯದಲ್ಲಿ ಈ ಹಬ್ಬ ಬರುವುದಕ್ಕಿಂತ ಮೊದಲು ಕಾರ್ಡ್‌ದಾರರಿಗೆ ಕೊಡುವುದನ್ನು ಕೊಟ್ಟು ಇನ್ನೂ ಎರಡು ಕೆ.ಜಿ. ಹೆಚ್ಚು ಸಕ್ಕರೆ ಕೊಡುತ್ತಿದ್ದರು. ಈಗ ಸಕ್ಕರೆ ಹೆಚ್ಚು ಕೊಡುವ ಪ್ರಶ್ನೆ ಇಲ್ಲವೇ ಇಲ್ಲ, ಆಹಾರ ಸಚಿವರು ಎಲ್ಲಿದ್ದಾರೆಂದು ಗೊತ್ತಿಲ್ಲ. ಇವತ್ತು ಪಾಮೋಲಿನ್ ಆಯಿಲ್ ಸಪ್ಲೈ ಇಲ್ಲ, ಸಕ್ಕರೆ ಕೊಡುತ್ತಾ ಇಲ್ಲ. ಈ ಬಗ್ಗೆ ಸರ್ಕಾರದಿಂದ ಸ್ಟೇಟ್‌ಮೆಂಟ್ ಬೇಕು. ಇವತ್ತು ಹೆಚ್ಚುವರಿ ಅಲ್ಲ, ಕಾರ್ಡಿಗೆ ಕೊಡಬೇಕಾದ್ದನ್ನು ಕೊಡಬೇಕಾಗುತ್ತದೆ.

ಅಧ್ಯಕ್ಷರು : ನಾಳೆ ಒಂದು ಸ್ಟೇಟ್‌ಮೆಂಟ್ ಮಾಡುತ್ತಾರೆ.